ಪಿ. ಜಯವಂತ ಪೈ, ಕುಂದಾಪುರ
◆ ಸ್ಮಶಾನದಲ್ಲೂ ಮದುವೆಗಳಾದರೆ ಕಲ್ಯಾಣಮಂಟಪದವರ ಗತಿ ಏನು?



ರಿಸೆಪ್ಷನ್ ಚೌಲ್ಟ್ರೀಲೇ ಇರುತ್ತದೆ. ಮಸಣದಲ್ಲಿ ರಿಸೆಪ್ಷನ್‌ಗೆ ಸತ್ತೂ ಯಾರೂ ಬರೋಲ್ಲ.

ಅಮರಯ್ಯಾ ಪತ್ರಿಮಠ, ಸುರಪುರ
◆ ಕೆಲವರು ತಮ್ಮ ಹೆಸರನ್ನು ಮೊಟಕುಗೊಳಿಸುವುದೇಕೆ?
ಸಹಿಯ ಉದ್ದ ಕಡಿಮೆಯಾಗಿ ರೀಫಿಲ್ ಹೆಚ್ಚು ದಿನ ಬಳಸಬಹುದೆಂಬ ಸದಾಶಯ.

ಪ್ರಶಾಂತ್ ಮಯ್ಯ, ಸಾಗರ
◆ ದೈಹಿಕವಾಗಿಯಾದರಷ್ಟೆ ವ್ಯಭಿಚಾರವೆ? ಮಾನಸಿಕವಾಗಿ ಆದರೆ?
ಇನ್ನೊಂದು ಮನಸ್ಸಿನ ಮೇಲೆ ದಾಳಿ ನಡೆಯುವುದಿಲ್ಲವಾದ್ದರಿಂದ ವ್ಯಭಿಚಾರವಲ್ಲ, ವಿಕಲ್ಪ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
◆ ಪ್ರಶಸ್ತಿಗಳಿಗೆ ಬೆಲೆ ಬರುವುದು ಯಾವಾಗ?




ಈಗಲೇ ಬಂದಿದೆಯಂತೆ. ಕೆಲ ಪ್ರಶಸ್ತಿಯ ಅಂದಾಜು ಬೆಲೆ ಒಂದು ಲಕ್ಷವಂತೆ.

ರಮೇಶ್, ಹನುಮನಾಳು
◆ ಏನೇನೋ ಮಾತನಾಡುವ ವೃದ್ಧರೊಬ್ಬರು ಒಮ್ಮೊಮ್ಮೆ ಹೇಳುವ ನಿಜವನ್ನೂ ಜನ ಕೇಳುವುದಿಲ್ಲವಲ್ಲಾ, ಏಕೆ?
ಏಕೆಂದರೆ ಮಾಧ್ಯಮದ ಸುದ್ದಿಗಳಂತೆಯೇ, ಸುಳ್ಳಿನ ಸುನಾಮಿಯಲ್ಲಿ ನಿಜ ಕಳೆದುಹೋಗಿರುತ್ತದೆ.

ಭಾರತಿ ಮಾನಗೆ, ಹೊನ್ನಾವರ
◆ ಮನುಷ್ಯನಿಗೆ ಸಂಸ್ಕೃತಿ, ಸಂಸ್ಕಾರ ಇಲ್ಲದಿದ್ದರೆ?
ಇಲ್ಲದಿರುವುದು ಅಸಾಧ್ಯ, ಕನಿಷ್ಠಪಕ್ಷ ಪಬ್ ಸಂಸ್ಕೃತಿ, ಶವಸಂಸ್ಕಾರವಾದರೂ ಇರುತ್ತದೆ.

ಎಂ.ಜಿ. ಉಮಾ, ಬಳ್ಳಾರಿ
◆ ರಾಜಕೀಯ ನಾಯಕರಿಗೆ ಜ್ಞಾನೋದಯ ಆಗುವುದು ಯಾವಾಗ?
ಹೈಕಮಾಂಡ್ ಪಾರ್ಟಿ ಟಿಕೆಟ್ ನಿರಾಕರಿಸಿದಾಗ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
◆ ಕೊಲ್ಲದೆಯೂ ಕೊಲ್ಲುವ ಶತ್ರುಗಳಾರು?
ಆರಲ್ಲ, ನಾಲ್ಕು. ಮೊದ್ದುತನ, ಕಲಿಕೆಗೆ ವಿರೋಧ, ಆಲಸ್ಯ, ಪರಾವಲಂಬನೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ
◆ ರಾಜಕಾರಣ ಎಂದರೆ ಕೈ ಕೆಸರಾಗದೆ ಬಾಯಿ ಮೊಸರು ಮಾಡಿಕೊಳ್ಳುವುದೆ?
ಅಲ್ಲ. ತಮ್ಮ ಕೈ ಕೆಸರು ಮಾಡಿಕೊಳ್ಳದೆ ಜನತೆಯ ಬಾಯಿಗೆ ಮಣ್ಣು ತಿನ್ನಿಸುವುದು.

ಕೊಟ್ಟೂರು ಜವಳಿ ಜಯ್ಯಣ್ಣ, ದಾವಣಗೆರೆ
◆ ಸ್ತ್ರೀಯರು ಕೋಪದಲ್ಲಿಯೂ ಹೆಚ್ಚು ಸುಂದರವಾಗಿ ಕಾಣುತ್ತಾರಂತೆ, ನಿಜವೆ?
ಕೆನ್ನೆ, ತುಟಿಗಳಲ್ಲಿ ಕೆಂಪು, ಕಂಪನ ಯಾವ ಕಾರಣಕ್ಕೆ ಉಂಟಾದರೂ ಚೆಲುವು ಎಂಬುದು ಕವಿವಾಣಿ.

ವಿ.ಎಸ್. ಹಿಂದೂಪುರ, ಬಳ್ಳಾರಿ
◆ ಅಪ್ಪಅಮ್ಮ; ಅತ್ತೆಮಾವ ಎರಡೇ ಅಕ್ಷರಗಳು ಏಕಿರಬಹುದು ಸಾರ್?
ಮಗಸೊಸೆಗೆ ವರಸೆಯಲ್ಲೂ ಒತ್ತು, ದೀರ್ಘಗಳು ಇಲ್ಲದಿರಲೆಂಬ ಸದಾಶಯ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
◆ ನಾವು ಕೇಳುವ ಪ್ರಶ್ನೆಗಳು ಹೇಗಿರಬೇಕು?
'ನಮಗೇಕೆ ಹೊಳೆಯಲಿಲ್ಲ' ಎಂದು ಇತರರು ಕೈ ಹಿಸುಕಿಕೊಳ್ಳುವಂತೆ.

ದಿನೇಶ್, ಗುಡ್ಡದೂರು
◆ ಸರ್ಕಾರದ ಕೆಲಸ ದೇವರ ಕೆಲಸ. ಸರ್ಕಾರಿ ನೌಕರರ ಕೆಲಸ?
ಕಾಯಿ ಒಡೆದು ದೊಡ್ಡ ಚಿಪ್ಪನ್ನು ತಮಗೆ, ಚಿಕ್ಕದನ್ನು ಭಕ್ತರಿಗೆ ಕೊಡುವ ಕೆಲಸ.

## ಬಹುಮಾನಿತ ಪ್ರಶ್ನೆ

ಎಂ.ಎ. ಕುಮಾರ್, ಬೆಂಗಳೂರು
◆ ಅಳತೆ ಮಾಡಿ ಕೊಡುವ ಮದ್ಯವನ್ನು ಅಳತೆ ಮೀರಿ ಕುಡಿಯುವುದೇಕೆ?
ನಶೆಯೇರುತ್ತಿದ್ದಂತೆ ಪೆಗ್ಗು ಮಗ್ ಆಗುವುದು ತಿಳಿಯುವುದಿಲ್ಲವಂತೆ.

ಎಸ್.ಎನ್. ಮಹಾಬಲರಾವ್, ಎನ್ನಾರ್ ಪುರ
◆ ದಿನಾ ಹಬ್ಬ ಬೇಕೆನ್ನುತ್ತಾಳಲ್ಲಾ...?
ತಪ್ಪಾಗಿ ಕೇಳಿಸಿಕೊಂಡಿದ್ದೀರಿ. ಆಕೆ ಹೇಳುವುದು (ಒಳಿತು) ದಿನಾ ಹಬ್ಬಬೇಕೆಂದು.

ಟಿ.ಆರ್. ರವೀಂದ್ರ, ಬೆಂಗಳೂರು
◆ ನಾವು ನಡೆಸುವ ಜೀವನ ಹೇಗಿರಬೇಕು?
ನಾವು ಮಾಡಿದ್ದನ್ನೇ ಮುಂದಿನ ಸಮಾಜ ಮಾಡಲು ಕಾತರಿಸುವಂತೆ.

ಮುರಲೀಧರ ಕುಲಕರ್ಣಿ, ಬೀದರ್
◆ ರಾತ್ರಿ ಊಟ ಮಾಡುವಾಗಲೇ ಶೌಚಾಲಯದ ಕಮೋಡ್ ತೋರಿಸುತ್ತಾರಲ್ಲ, ಏಕೆ?



ಸಹ್ಯಕ್ಕಿಂತ ಅಸಹ್ಯವು ಮನದಲ್ಲಿ ಹೆಚ್ಚು ಕಾಲ ಉಳಿಯುತ್ತದೆಂದು.

ರತ್ನಾ ಗೊರವರ, ಧಾರವಾಡ
◆ ಇಂದಿನ ಕಿಶೋರಿಯರು ನಾಚಿ ನೆಲ ಕೆರೆಯುವುದಿಲ್ಲ. ಏಕೆ?
ಮುನ್ನೆಚ್ಚರಿಕೆಯ ಕ್ರಮ! ಕೆರೆದರೆ ಪೆಡಿಕ್ಯೂರ್ ಹಾಳಾಗುತ್ತದಲ್ಲ.

ಜೆ.ಸಿ. ರವಿಕುಮಾರ್, ಜಯಸುವರ್ಣಪುರ
◆ ಇಸ್ಪೀಟ್ ಆಟವನ್ನೇಕೆ 'ಭಜನೆ' ಎಂದು ಕರೆಯುತ್ತಾರೆ?
ಹಣ ವಿ'ಭಜನೆ' ಆಗುವುದರಿಂದ, ಕಳೆದುಕೊಂಡವನಿಗೆ ಭಜನೆಯೇ ಗತಿಯಾದ್ದರಿಂದ.

■ ರಾಮ್